ಕರ್ನಾಟಕ ಸರ್ಕಾರ

ಇಲಾಖೆ : ವಿದ್ಯುತ್ ಪರಿವೀಕ್ಷಣಾಲಯ
ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ,
ಪಿ.ಬಿ ನಂ.5148, 2ನೇ ಮಹಡಿ, ನಿರ್ಮಾಣ ಭವನ,
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ,
ಬೆಂಗಳೂರು-560010 .

ಇಲಾಖೆ : ವಿದ್ಯುತ್ ಪರಿವೀಕ್ಷಣಾಲಯ

# ವಾರ್ಷಿಕ ವರದಿ
# 2021-22

# ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ

## ಮುನ್ನುಡಿ:

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ರಾಜ್ಯದ ಒಂದು ಸಂವಿಧಾನಕ ಕ್ಷೇತ್ರಿಯ ಇಲಾಖೆಯಾಗಿ 1957ನೇ ಇಸವಿ ಅಕ್ಟೋಬರ್ ತಿಂಗಳ ಒಂದರಂದು ಹಿಂದಿನ ವಿದ್ಯುಚ್ಛಕ್ತಿ ಕಾಯಿದೆ 1910 ರಲ್ಲಿನ ಅವಕಾಶದಂತೆ ಭಾರತೀಯ ವಿದ್ಯಚ್ಛಕ್ತಿ ನಿಯಮಗಳು 1956ರ ರಚನೆಯ ನಂತರ ಕಾರ್ಯರೂಪಕ್ಕೆ ಬಂದಿರುತ್ತದೆ. ಮುಖ್ಯ ವಿದ್ಯುತ್ ಪರಿವೀಕ್ಷಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಇಲಾಖೆಯು ಕರ್ನಾಟಕ ಸರ್ಕಾರದ ಇಂಧನ ಸಚಿವಾಲಯದ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಮುಖ್ಯಸ್ಥರಾಗಿದ್ದು ಜೊತೆಯಲ್ಲಿ, ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿಗಳು (ಪರವಾನಗಿ) ಇಂಧನ ಇಲಾಖೆ, ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಸಿನಿಮಾ ಆಪರೇಟರ್ ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಬಿ.ಐ.ಎಸ್ ನ ಲಿಫ್ಟ್ ಮತ್ತು ಎಸ್ಕಲೇಟರ್‌ಗಳ ವಿಭಾಗೀಯ ಸಮಿತಿಯ (ETD 25) ಸದಸ್ಯರು, ರಾಜ್ಯ ಲಿಫ್ಟ್‌ಗಳ ಪರಿವೀಕ್ಷಕರು ಹಾಗೂ ಸರ್ಕಾರಕ್ಕೆ ವಿದ್ಯುಚ್ಛಕ್ತಿಯ ವಿಷಯದ ಬಗ್ಗೆ ಸಲಹೆಗಾರರು ಆಗಿರುತ್ತಾರೆ.

## ಇಲಾಖಾ ಧ್ಯೇಯೋದ್ದೇಶಗಳು:

ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಸ್ಥಾವರಗಳು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು, 2010ರಂತೆ, ಸುರಕ್ಷತಾ ಕೋಡ್ ಮತ್ತು ಸ್ಟಾಂಡರ್ಡ್‌ಗಳಿಗೆ ಅನುಗುಣವಾಗಿರುವಂತೆ ಖಚಿತಪಡಿಸಿ ಕೊಳ್ಳುವುದು ಈ ಇಲಾಖೆಯ ಮುಖ್ಯ ಗುರಿಯಾಗಿರುತ್ತದೆ. ಮಾನವ, ಪ್ರಾಣಿ ಜೀವಕ್ಕೆ ಮತ್ತು ಆಸ್ತಿ ಪಾಸ್ತಿಗೆ ಹಾನಿಯಾಗದಂತೆ ಸುರಕ್ಷತೆಗಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ವಿದ್ಯುಚ್ಛಕ್ತಿಯ ಉತ್ಪಾದನೆ, ಪ್ರಸರಣಾ, ವಿತರಣೆ ಮತ್ತು ಬಳಕೆಯ ರಂಗಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದು ಈ ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ. ವಿದ್ಯುಚ್ಛಕ್ತಿ ಕಾಯಿದೆ 2003, ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು, 2010, ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೆಯರ್‌ಗಳ ಕಾಯಿದೆ 2012 ಮತ್ತು ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೆಯರ್‌ಗಳ ನಿಯಮಗಳು 2015, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಕಾಯಿದೆ 1964 ಮತ್ತು ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು 2014, ಕರ್ನಾಟಕ ವಿಡಿಯೋ ಕ್ಯಾಸೆಟ್ ರೆಕಾರ್ಡರ್ ನಿಯಮಗಳು 1984 ಮತ್ತು ಕರ್ನಾಟಕ (ವಿದ್ಯುತ್ ಗುತ್ತಿಗೆದಾರರಿಗೆ ಪರವಾನಗಿ, ವಿಶೇಷ ತಂತಿ ರಹದಾರಿ ನೀಡುವ ಮತ್ತು ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರಿಗೆ ಅರ್ಹತಾ ಪತ್ರ ರಹದಾರಿ ನೀಡುವಿಕೆ) ನಿಯಮಗಳು 2012 ರ ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುವುದು. ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟ ಮೇಲಣ ತೆರಿಗೆ) ಕಾಯ್ದೆ 1959 ಮತ್ತು ಅದರಡಿಯಲ್ಲಿ ರಚಿಸಲಾದಂತಹ ನಿಯಮಗಳ ಪ್ರಕಾರ ಸರಬರಾಜುದಾರರಿಂದ /ಕ್ಯಾಪ್ಟೀವ್ ಜನರೇಷನ್ ಸೇರಿದಂತೆ ಇತರರಿಂದ ಸ್ವೀಕೃತಗೊಂಡ ತೆರಿಗೆ ಪಾವತಿ ವಿವರಗಳನ್ನು ಪರಿಶೀಲಿಸುವುದು ಈ ಇಲಾಖೆಯ ಮತ್ತೊಂದು ಉದ್ದೇಶವಾಗಿರುತ್ತದೆ.

## ಇಲಾಖಾ ಕರ್ತವ್ಯಗಳು:

ಕೇಂದ್ರ ಹಾಗೂ ರಾಜ್ಯಗಳ ವಿವಿಧ ಕಾಯಿದೆ ಮತ್ತು ನಿಯಮಗಳ ಪ್ರಕಾರ ಇಲಾಖೆಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

1) ಕ.ವಿ.ಪ್ರ.ನಿ.ನಿ, ವಿ.ವಿ.ಎನ್.ಎಲ್. ಸ್ವತಂತ್ರ ವಿದ್ಯುತ್ ಉತ್ಪಾದಕರ (ಹೈಡ್ರೋ, ಥರ್ಮಲ್ ವಿಂಡ್, ಡೀಸೆಲ್, ಕೋ-ಜನರೇಷನ್, ಬಯೋ-ಮಾಸ್, ಇತರೆ) ಸರಬರಾಜುದಾರರ / ಲೈಸೆನ್ಸ್‌ದಾರರ ವಿತರಣಾ ಕೇಂದ್ರ ಹಾಗೂ ಮಾರ್ಗ, ವಿದ್ಯುತ್ ಸರಬರಾಜುದಾರ ಕಂಪನಿಗಳ ವಿತರಣಾ ಕೇಂದ್ರ ಹಾಗೂ ಮಾರ್ಗ, ಇಹೆಚ್‌ಟಿ, ಹೆಚ್‌ಟಿ, ವಿದ್ಯುಜ್ಜನಕ (ಸಿ.ಜಿ./ಡಿ.ಜಿ/ಟಿ.ಜಿ), 15 ಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ಎತ್ತರದ ಬಹುಮಹಡಿ ಕಟ್ಟಡ, ಲಿಫ್ಟ್ ಮತ್ತು ಎಸ್ಕಲೇಟರ್, ಮತ್ತು ಸಿನಿಮಾ ವಿದ್ಯುತ್ ಸ್ಥಾವರಗಳ ರೇಖಾ ಚಿತ್ರಗಳ ಪರಿಶೀಲನೆ ಹಾಗೂ ಅನುಮೋದನೆ ನೀಡುವುದು.
2) ಮೇಲ್ಕಂಡ ವಿದ್ಯುತ್ ಸ್ಥಾವರಗಳ ಹಾಗೂ ಕ್ಷ-ಕಿರಣ ನಿಯಾನ್‌ಸೈನ್ ಮತ್ತು ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪ್ರಾಥಮಿಕ ಪರಿವೀಕ್ಷಣೆ ಮಾಡಿ ಸುರಕ್ಷತಾ ನಿಯಮಗಳಿಗೆ ಒಳಪಟ್ಟಿದ್ದಲ್ಲಿ ಚಾಲನೆಗೊಳಿಸಲು ಅನುಮೋದನೆ ನೀಡುವುದು ಹಾಗೂ ಕಾಲಕಾಲಕ್ಕೆ ಮೇಲ್ಕಂಡ ವಿದ್ಯುತ್ ಸ್ಥಾವರಗಳ ಮತ್ತು ಮಧ್ಯಮ ಒತ್ತಡ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ನಡೆಸುವುದು.
3) ವಿದ್ಯುತ್ ಅಪಘಾತಗಳ ತನಿಖೆ ನಡೆಸಿ, ಅಪಘಾತ ತಡೆಯುವ ಸಲಹೆಗಳೊಂದಿಗೆ ಸರ್ಕಾರಕ್ಕೆ ವರದಿ ಮಾಡುವುದು. ವಿದ್ಯುತ್ ಸರಬರಾಜುದಾರರು ಮತ್ತು ಲೈಸೆನ್ಸಿಗಳೊಂದಿಗೆ ವಿದ್ಯುತ್ ಅಪಘಾತಗಳನ್ನು ತಡೆಯುವ ಬಗ್ಗೆ ವ್ಯವಹರಿಸುವುದು.
4) ವಿದ್ಯುತ್ ಸರಬರಾಜುದಾರರು / ಲೈಸೆನ್ಸಿಗಳಿಂದ ವಸೂಲಾದ ತೆರಿಗೆ ಮತ್ತು ಸ್ವವಿದ್ಯುತ್ ಮೇಲೆ ವಸೂಲಾದ ವಿದ್ಯುತ್ ತೆರಿಗೆಗಳ ಲೆಕ್ಕಾಚಾರ ಮತ್ತು ವಸೂಲಿ ಬಗ್ಗೆ ಕ್ರಮ ಕೈಗೊಳ್ಳುವುದು.
5) ವಿದ್ಯುತ್ ಗುತ್ತಿಗೆದಾರರಿಗೆ, ಸೂಪರ್ ವೈಸರ್‌ಗಳಿಗೆ, ವೈರ್‌ಮನ್‌ಗಳಿಗೆ ಮತ್ತು ವಿಶೇಷ ವೈರ್‌ಮನ್ ಪರ್ಮಿಟ್‌ಗಳಿಗೆ ಹೊಸ ಲೈಸೆನ್ಸ ನೀಡುವುದು ಮತ್ತು ನವೀಕರಣಗೊಳಿಸುವುದು. ಔದ್ಯಮಿಕ ಮತ್ತು ಗಣಿ ಪರ್ಯವೇಕ್ಷಕರ ಮತ್ತು ತಂತಿಕರ್ಮಿಗಳ ಪರೀಕ್ಷೆ ನಡೆಸುವುದು.
6) ಸಿನಿಮಾ ಆಪರೇಟರ್‌ಗಳಿಗೆ ಪರ್ಮಿಟ್ ನೀಡಲು ಪರೀಕ್ಷೆ ನಡೆಸುವುದು ಮತ್ತು ಪರ್ಮಿಟ್ ನೀಡುವುದು.

## ಇಲಾಖೆಯ ಬಗ್ಗೆ:

ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಅದರ ಮುಖ್ಯ ಕಚೇರಿಯು ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ನಿರ್ಮಾಣ ಭವನ, 2ನೇ ಮಹಡಿ, ಡಾ: ರಾಜ್‌ಕುಮಾರ್ ರಸ್ತೆ, ರಾಜಾಜಿನಗರ ಬೆಂಗಳೂರು 560 010 ರಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

ಆಡಳಿತ, ಕಾಯಿದೆ ಹಾಗೂ ನಿಯಮಗಳಲ್ಲಿ ಸೂಚಿಸಿರುವಂತೆ ವಿದ್ಯುತ್ ಸುರಕ್ಷತೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಕರು, ಉಪ ವಿದ್ಯುತ್ ಪರಿವೀಕ್ಷಕರು, ಸಹಾಯಕ ವಿದ್ಯುತ್ ಪರಿವೀಕ್ಷಕರು ಹಾಗೂ ಇತರೆ ಸಿಬ್ಬಂದಿಗಳು ಸಹಕರಿಸುತ್ತಿರುತ್ತಾರೆ.

## ಕಾರ್ಯನಿರ್ವಹಣೆ ಬಗ್ಗೆ ಸಂಕ್ಷಿಪ್ತ ವರದಿ:

**202-22 ರಲ್ಲಿ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆಗಳ ಅನುಮೋದನೆಯ ಅಂಕಿ ಅಂಶಗಳು:**

ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು, 2010, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಕಾಯಿದೆ 1964 ಮತ್ತು ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು 2014 ಹಾಗೂ ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೆಯರ್‌ಗಳ ಕಾಯ್ದೆ 2012 ಮತ್ತು ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೆಯರ್‌ಗಳ ನಿಯಮಗಳು 2015 ಅಡಿಯಲ್ಲಿ ಏಪ್ರಿಲ್-2021 ರಿಂದ ಮಾರ್ಚ್-2022 ರ ಅಂತ್ಯಕ್ಕೆ ಈ ಇಲಾಖೆಯಿಂದ ಅನುಮೋದಿಸಿದ ವಿವಿಧ ವಿದ್ಯುತ್ ಸ್ಥಾವರಗಳ ನೀಲನಕ್ಷೆಗಳ ಅಂಕಿ ಅಂಶಗಳ ಸಂಕ್ಷಿಪ್ತ ವಿವರಗಳು ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ಸ್ಥಾವರಗಳ ವಿವರ | ಸಂಖ್ಯೆ |
|---|---|---|
| 1 | ವಿತರಣಾ ಕೇಂದ್ರ | 103 |
| 2 | ಟಿ & ಡಿ ಲೈನ್ಸ್ | 64 |
| 3 | ಹೆಚ್.ಟಿ, ನಕ್ಷೆ | 1629 |
| 4 | ಡಿ.ಜಿ / ಸೋಲಾರ್ | 3217 |
| 5 | ಡಿ.ಸಿ.ಡಬ್ಲ್ಯೂ ಲೇಔಟ್ | 12864 |
| 6 | ಎಂ.ಎಸ್.ಬಿ. | 3064 |
| 7 | ಲಿಫ್ಟ್‌ಗಳು / ಎಸ್ಕಲೇಟರ್‌ಗಳು / ಪ್ಯಾಸೆಂಜರ್ ಕನ್ವೇಯರ್‌ಗಳು | 5430 |
| 8 | ಸಿನಿಮಾ ಕಟ್ಟಡದ ವಿದ್ಯುತ್ ಸ್ಥಾವರಗಳು | 7 |
| 9 | ಇತರೆ | 895 |

# 2021-22 ನೇ ಸಾಲಿನಲ್ಲಿ ಪರಿವೀಕ್ಷಿಸಿದ ಸ್ಥಾವರಗಳ ಅಂಕಿ ಅಂಶಗಳು

| ಕ್ರ.ಸಂ. | ವಿವರಗಳು | | | 01-04-2021 ರಿಂದ 31-03-2022 ರವರೆಗೆ ನಡೆಸಿದ ನಿಯತಕಾಲಿಕ ಪರಿವೀಕ್ಷಣೆ | 01-04-2021 ರಿಂದ 31-03-2022 ರವರೆಗೆ ನಡೆಸಿದ ಪ್ರಥಮ ಪರಿವೀಕ್ಷಣೆ |
|---|---|---|---|---|---|
| 1 | 2 | | | 4 | 5 |
| 1 | ವಿದ್ಯುತ್ ಉತ್ಪಾದನಾ ಕೇಂದ್ರಗಳು | ಕೆ.ಪಿ.ಸಿ.ಎಲ್ | ಹೈಡಲ್ | 6 | 0 |
| | | | ಥರ್ಮಲ್ | 0 | 0 |
| | | | ವಿಂಡ್ ಮಿಲ್ಸ್ | 0 | 0 |
| | | | ಸೋಲಾರ್ | 1 | 0 |
| | | ಪ್ರೈವೇಟ್ | ಹೈಡಲ್ / ಮಿನಿ ಹೈಡಲ್ | 97 | 0 |
| | | | ಥರ್ಮಲ್ | 15 | 5 |
| | | | ಬಯೋ ಮಾಸ್ | 8 | 0 |
| | | | ವಿಂಡ್ ಮಿಲ್ಸ್ | 3969 | 65 |
| | | | ಸೋಲಾರ್ | 432 | 7 |
| | | | ಕೋಜನ್ | 89 | 1 |
| | | | ಇತರೆ | 1 | 0 |
| 2 | ವಿದ್ಯುತ್ ಪ್ರಸರಣಾ ಮಾರ್ಗಗಳು ಕಿ.ಮಿ.ಗಳಲ್ಲಿ | | ಇ ಹೆಚ್‌ವಿ | 925 | 608.91 |
| | | | ಹೆಚ್ ವಿ | 3490.39 | 8585.5 |
| | | | ಎಂ ವಿ | 3106.9 | 3001.7 |
| 3 | ವಿದ್ಯುತ್ ವಿತರಣಾ ಕೇಂದ್ರಗಳು | | ಕೆ.ಪಿ.ಟಿ.ಸಿ.ಎಲ್. | 96 | 58 |
| | | | ಎಸ್ಕಾಂ (೩೩ಕೆವಿ) | 31 | 10 |
| | | | ಪ್ರೈವೇಟ್ | 158 | 16 |
| 4 | ಪರಿವರ್ತಕ ಕೇಂದ್ರಗಳು | | ಪರಿವರ್ತಕ ಕೇಂದ್ರಗಳು | 5636 | 32775 |
| 5 | ಗ್ರಾಹಕರ ವಿದ್ಯುತ್ ಸ್ಥಾವರಗಳು | | ಹೆಚ್ ಟಿ ಸ್ಥಾವರಗಳು | 22447 | 1569 |
| | | | ಬಹು ಮಹಡಿ ಕಟ್ಟಡ ಸ್ಥಾವರಗಳು (ಹೆಚ್.ಟಿ.ಎಂ.ಎಸ್.ಬಿ) | 4290 | 220 |
| | | | ಬಹು ಮಹಡಿ ಕಟ್ಟಡ ಸ್ಥಾವರಗಳು (ಎಲ್.ಟಿ.ಎಂ.ಎಸ್.ಬಿ) | 3208 | 2681 |
| | | | ಮಲ್ಟಿಪ್ಲೆಕ್ಸ್ – ಸಂಖ್ಯೆ | 7 | 3 |
| | | | ಮಲ್ಟಿಪ್ಲೆಕ್ಸ್ – ಸ್ಕ್ರೀನ್ಸ್ | 50 | 10 |
| 5 | | | ಖಾಯಂ ಸಿನೆಮಾ | 71 | 6 |
| | | | ಅರೆ ಖಾಯಂ ಸಿನೆಮಾ | 9 | 1 |
| | | | ಸಂಚಾರಿ ಸಿನೆಮಾ | 7 | 1 |
| | | | ವಿಡಿಯೋ | 4 | 0 |
| | | | ಕ್ಷ– ಕಿರಣಗಳು | 1134 | 11 |
| | | | ನಿಯಾನ್ ಚಿನ್ಹೆಗಳು | 50 | 0 |
| | | | ಲಿಫ್ಟ್ | 27207 | 4168 |
| | | | ಎಸ್ಕಲೇಟರ್‌ಗಳು | 1100 | 97 |
| | | | ಡಿಜಿ ಸೆಟ್ | 46345 | 2839 |
| | | | ಸೋಲಾರ್ | 935 | 7 |

## <u>ವಿದ್ಯುತ್ ಅಪಘಾತಗಳು:</u>

2021-22 (01-04-2021 ರಿಂದ 31-03-2022) ನೇ ಸಾಲಿನಲ್ಲಿ ಒಟ್ಟು 2018 ವಿದ್ಯುತ್ ಅಪಘಾತಗಳು ವರದಿಯಾಗಿದ್ದು, ಅವುಗಳಲ್ಲಿ 508 ಸಂಖ್ಯೆಯು ಮಾನವರಿಗೆ ಮರಣಾಂತಿಕ ಅಪಘಾತಗಳಾಗಿದ್ದು, 217 ಸಂಖ್ಯೆಯು ಮಾನವರಿಗೆ ಅಮರಣಾಂತಿಕ ಅಪಘಾತಗಳಾಗಿದ್ದು, 460 ಸಂಖ್ಯೆಯು ಪ್ರಾಣಿಗಳಿಗೆ ಮರಣಾಂತಿಕ ಅಪಘಾತಗಳಾಗಿದ್ದು, 10 ಸಂಖ್ಯೆಯು ಆನೆಗಳಿಗೆ ಮರಣಾಂತಿಕ ಅಪಘಾತ ಮತ್ತು 823 ಸಂಖ್ಯೆಯ ಬೆಂಕಿ ಅಪಘಾತಗಳಾಗಿರುತ್ತವೆ.

ಎಲ್ಲಾ ವಿದ್ಯುತ್ ಅಪಘಾತಗಳನ್ನು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003ರ ಸೆಕ್ಷನ್ 161 ರ ಅನ್ವಯ ಮತ್ತು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು, 2010 ರನ್ವಯ ತನಿಖೆ ನಡೆಸಿದ್ದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ ಮತ್ತು ಮುಂದೆ ಅಪಘಾತಗಳು ಸಂಭವಿಸದಂತೆ ತಡೆಯಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸಹ ತಿಳಿಸಲಾಗಿರುತ್ತದೆ.

## <u>ವಿದ್ಯುತ್ ಅಪಘಾತಗಳ ಕಾರಣಗಳು:</u>

ಏಪ್ರಿಲ್ 2021 ರಿಂದ ಮಾರ್ಚ್ 2022 ರ ಅಂತ್ಯಕ್ಕೆ ಜರುಗಿದ ವಿದ್ಯುತ್ ಅಪಘಾತಗಳು ಹಾಗು ಅವುಗಳ ಕಾರಣಗಳು ಈ ಕೆಳಕಂಡಂತಿರುತ್ತವೆ.

<u>ಏಪ್ರಿಲ್ 2021 ರಿಂದ ಮಾರ್ಚ್ 2022 ರ ಅಂತ್ಯಕ್ಕೆ ವರದಿಯಾದ ವಿದ್ಯುತ್ ಅಪಘಾತಗಳು</u>

| ಸಂಖ್ಯೆ | ಕಾರಣಗಳು | ಮಾನವರಿಗೆ | | | | ಪ್ರಾಣಿಗಳು | ಆನೆಗಳು | ಬೆಂಕಿ ಅಪಘಾತ | ಒಟ್ಟು |
|---|---|---|---|---|---|---|---|---|---|
| | | ಮರಣಾಂತಿಕ | | ಅಮರಣಾಂತಿಕ | | | | | |
| | | ಇಲಾಖೇತರ | ಇಲಾಖೆ | ಇಲಾಖೇತರ | ಇಲಾಖೆ | ಮರಣಾಂತಿಕ | ಮರಣಾಂತಿಕ | | |
| 1 | ವಿದ್ಯುತ್ ವಾಹಕಗಳು ತುಂಡಾಗುವುದರಿಂದ | 51 | 0 | 7 | 0 | 147 | 0 | 51 | 271 |
| 2 | ಮರದ ಕೊಂಬೆಗಳು ಬೀಳುವುದರಿಂದ | 7 | 0 | 1 | 1 | 10 | 0 | 5 | 24 |
| 3 | ವಿದ್ಯುತ್ ಕಂಬಗಳು ಮುರಿಯುವುದರಿಂದ | 2 | 0 | 0 | 0 | 9 | 0 | 0 | 11 |
| 4 | ವಿದ್ಯುತ್ ಪೂರಿತ ವಾಹಕಗಳ / ಉಪಕರಣಗಳ ಆಕಸ್ಮಿಕ ಸಂಪರ್ಕದಿಂದ | 254 | 12 | 108 | 57 | 34 | 0 | 21 | 488 |
| 5 | ಲೋಹದ ಭಾಗಗಳು ಚೇತನಗೊಳ್ಳುವುದರಿಂದ | 23 | 1 | 1 | 0 | 17 | 0 | 0 | 40 |
| 6 | ಸೋರಿಕೆ ವಿದ್ಯುತ್ ನಿಂದ/ ಗೈ ವೈರ್/ಭೂಸಂಪರ್ಕ ತಂತಿ ಚೇತನಗೊಳ್ಳುವುದರಿಂದ | 34 | 0 | 2 | 2 | 206 | 0 | 6 | 251 |
| 7 | ವಿದ್ಯುತ್ ಮಾಪಕ/ಆಫ್ ಪೋಲ್ ವಿದ್ಯುತ್ ನಿಂದ ಚೇತನಗೊಳ್ಳುವುದರಿಂದ | 0 | 0 | 0 | 0 | 0 | 0 | 0 | 0 |
| 8 | ಗ್ರಾಹಕರ ಸ್ಥಾವರಗಳಲ್ಲಿರುವ ವಿದ್ಯುತ್ ವೈಯರಿಂಗ್ ಮತ್ತು ಉಪಕರಣಗಳ ನ್ಯೂನತೆಯಿಂದ | 34 | 1 | 3 | 1 | 0 | 0 | 29 | 68 |
| 9 | ಅನಧಿಕೃವಾಗಿ ತಂತಿ ಬೇಲಿಗಳನ್ನು ಚೇತನಗೊಳಿಸುವುದರಿಂದ | 11 | 0 | 0 | 0 | 1 | 7 | 0 | 19 |
| 10 | ಬೇರೆ ಯಾವುದಾದರೂ ಕಾರಣಗಳಿಂದ | 65 | 3 | 20 | 12 | 20 | 2 | 590 | 712 |
| 11 | ವಿದ್ಯುಚ್ಛಕ್ತಿಯ ಹೊರತು ಇತರೆ ಬೇರೆ ಯಾವುದಾದರು ಕಾರಣಗಳಿಂದ | 9 | 1 | 0 | 1 | 1 | 1 | 121 | 134 |
| | **ಒಟ್ಟು** | 490 | 18 | 142 | 75 | 460 | 10 | 823 | 2018 |

**ಪರವಾನಗಿ ಸಲಹಾ ಹಾಗೂ ಪರೀಕ್ಷಾ ಮಂಡಳ**

ವಿದ್ಯುತ್ ಗುತ್ತಿಗೆದಾರ ಪರವಾನಗಿ ಹಾಗೂ ಪರೀಕ್ಷಾ ಮಂಡಳ ತಿಂಗಳಗೊಮ್ಮೆ ಸಭೆ ಸೇರಿ, ಹಿಂದಿನ ತಿಂಗಳನಲ್ಲಿ ಸ್ವೀಕೃತಗೊಂಡ ಪರವಾನಗಿ ಅರ್ಜಿಗಳನ್ನು ಪರಾಮರ್ಷಿಸಿ, ಹೊಸ ಹಾಗೂ ನವೀಕೃತ ಪರವಾನಗಿಗಳನ್ನು ನೀಡಲಾಗುತ್ತಿರುತ್ತದೆ.

2021-22 ರ ಅವಧಿಯಲ್ಲಿ ನೀಡಲಾದ ಮತ್ತು ನವೀಕರಿಸಲಾದ ಪರವಾನಗಿ ಮತ್ತು ರಹದಾರಿಗಳ ಅಂಕಿ ಅಂಶಗಳು.

| ಕ್ರಮ ಸಂಖ್ಯೆ | ವಿವರ | 2021-22 (ಏಪ್ರಿಲ್-2021 ರಿಂದ ಮಾರ್ಚ್-2022) ರಲ್ಲಿ ವಿತರಿಸಲಾದ ಹೊಸ ಪರವಾನಗಿ ಮತ್ತು ರಹದಾರಿಗಳ ಸಂಖ್ಯೆ | 2021-22 (ಏಪ್ರಿಲ್-2021 ರಿಂದ ಮಾರ್ಚ್-2022) ರಲ್ಲಿ ನವೀಕರಿಸಿದ ಪರವಾನಗಿ ಮತ್ತು ರಹದಾರಿಗಳ ಸಂಖ್ಯೆ |
|---|---|---|---|
| 1 | ವಿದ್ಯುತ್ ಗುತ್ತಿಗೆದಾರರ ಪರವಾನಗಿ | | |
| | ಎಸ್.ಜಿ.ಎಲ್. | 37 | 94 |
| | ವರ್ಗ - 1 | 847 | 1776 |
| | ವರ್ಗ - 2 | 1407 | 1578 |
| | ವರ್ಗ - 3 | 0 | 0 |
| 2 | ವಿಶೇಷ ತಂತಿ ರಹದಾರಿಗಳು | 2 | 3 |
| 3 | ವಿದ್ಯುತ್ ಪರ್ಯವೇಕ್ಷಕರು(ಕೈಗಾರಿಕೆ) ರಹದಾರಿಗಳು | | |
| | ಗ್ರೇಡ್-1 | 1463 | 1677 |
| | ಗ್ರೇಡ್-2 | 19 | 128 |
| 4 | ವಿದ್ಯುತ್ ಪರ್ಯವೇಕ್ಷಕರು(ಗಣಿ) ರಹದಾರಿಗಳು | | |
| | ಗ್ರೇಡ್-1 | 1 | 4 |
| | ಗ್ರೇಡ್-2 | 2 | 13 |
| 5 | ತಂತಿ ರಹದಾರಿಗಳು | | |
| | ಗ್ರೇಡ್-1 | 3141 | 2528 |
| | ಗ್ರೇಡ್-2 | 159 | 687 |

## ವಿದ್ಯುತ್ಛಕ್ತಿ ಬಳಕೆ ಮತ್ತು ಮಾರಾಟ ಮೇಲಣ ತೆರಿಗೆ.

ಕ.ವಿ.ಪ್ರ.ನಿ.ನಿಯಮಿತದ ಕಂಪನಿಗಳಿಂದ, ಐ.ಪಿ.ಪಿಗಳಿಂದ ಮತ್ತು ಮೆ. ಹುಕ್ಕೇರಿ ತಾಲ್ಲೂಕು ಕೋ ಆಪರೇಟಿವ್ ಸೊಸೈಟಿಯಿಂದ 2021-22 ನೇ ಸಾಲಿನಲ್ಲಿ ರವರೆಗೆ ವಸೂಲಾತಿ ಮಾಡಲಾದ ತೆರಿಗೆ ವಿವರಗಳು, ರೂ.ಗಳಲ್ಲಿ

### ರಾಜಸ್ವ ಕಂದಾಯ ವಿವರಣಾ ಪಟ್ಟಿ 2021-22

| ಸಂಖ್ಯೆ. | ವಿವರಗಳು | 2021-22 (ಏಪ್ರಿಲ್-2021 ರಿಂದ ಮಾರ್ಚ್-2022 ನೇ ಸಾಲಿನಲ್ಲಿ ಒಟ್ಟು ತೆರಿಗೆ ವಸೂಲಾತಿ (ರೂ. ಗಳಲ್ಲಿ) |
|---|---|---|
| 1 | ವಿದ್ಯುತ್ ಸರಬರಾಜು ಕಂಪನಿಗಳು | 23455900000.00 |
| 2 | ಐಪಿಪಿ/ಸಿಪಿಪಿ/ | 3069804756.00 |
| | ಒಟ್ಟು | 26525704756.00 |

ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಸ್ಥಾವರಗಳು ಸುರಕ್ಷತೆಯಾಗಿರುವ ಉದ್ದೇಶದಿಂದ ಸದರಿ ಸ್ಥಾವರಗಳನ್ನು ಪ್ರಾಥಮಿಕವಾಗಿ ಮತ್ತು ನಿಯತಕಾಲಿಕವಾಗಿ ಪರಿವೀಕ್ಷಣೆ ಮಾಡಿ ಪರಿವೀಕ್ಷಣಾ ಶುಲ್ಕವನ್ನು ವಸೂಲಿ ಮಾಡಲಾಗುತ್ತಿರುತ್ತದೆ.

ಬಳಕೆದಾರರು ಬಳಸುವ ವಿದ್ಯುತ್‌ನ ಬಿಲ್ ಮೊತ್ತದ ಮೇಲೆ ಶೇ. 9 ರಂತೆ ವಿದ್ಯುತ್ ತೆರಿಗೆಯನ್ನು ವಿಧಿಸಿ ಸರಬರಾಜುದಾರರ ಮುಖಾಂತರ ವಸೂಲಿ ಮಾಡಲಾಗುತ್ತಿದೆ. ಈ ರೀತಿ ವಸೂಲಾಗುವ ತೆರಿಗೆ ಸಂಬಂಧಪಟ್ಟ ನಮೂನೆಗಳನ್ನು ಮತ್ತು ಪುಸ್ತಕಗಳನ್ನು ಪರಿಶೀಲಿಸಿ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲಣ ತೆರಿಗೆ) ಕಾಯಿದೆ 1959ರ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಪ್ರಕಾರ ಇರುವುದೇ ಎಂಬುದನ್ನು ಗಮನಿಸಲಾಗುತ್ತದೆ.

### 2021-22 ರ ರಾಜಸ್ವ ಕಂದಾಯ ವಿವರ (ವಿದ್ಯುಚ್ಛಕ್ತಿ ತೆರಿಗೆಯೇತರ)

| ಕ್ರಮ ಸಂಖ್ಯೆ | ವಿವರಗಳು | 2021-22 ನೇ ಸಾಲಿನ ರಾಜಸ್ವ ವಿವರಗಳು (ರೂ. ಗಳಲ್ಲಿ) |
|---|---|---|
| 1 | ಪರಿವೀಕ್ಷಣಾ ಶುಲ್ಕ (ಐಇ ರೂಲ್ಸ್) | 645038625.00 |
| 2 | ಸಿನಿಮಾ ಪರಿವೀಕ್ಷಣಾ ಶುಲ್ಕ | 412200.00 |
| 3 | ಪರವಾನಗಿ ಮತ್ತು ರಹದಾರಿ ನವೀಕರಣ (ಪರೀಕ್ಷಾ ಶುಲ್ಕಾವನ್ನು ಒಳಗೊಂಡು) | 25850001.00 |
| 4 | ಲಿಫ್ಟ್‌ಗಳು | 36023189.00 |
| 5 | ಇತರೆ | 5549049.00 |
| | ಒಟ್ಟು | 712873064.00 |

## 2021-22 ರ ಒಟ್ಟು ರಾಜಸ್ವ ಕಂದಾಯದ ವಿವರ

| ಕ್ರಮ ಸಂಖ್ಯೆ | ವಿವರಗಳು | 2021-22 (ನೇ ಸಾಲಿನಲ್ಲಿನ ಒಟ್ಟು ವಸೂಲಾತಿ (ರೂ. ಗಳಲ್ಲಿ) |
|---|---|---|
| 1. | ವಿದ್ಯುಚ್ಛಕ್ತಿ ತೆರಿಗೆಯಿಂದ ವಸೂಲಾತಿ ಮಾಡಲಾದ ರಾಜಸ್ವ ಕಂದಾಯ | 26525704756.00 |
| 2. | ಪರಿವೀಕ್ಷಣಾ ಶುಲ್ಕ ಮತ್ತು ಇತರೆ ಶುಲ್ಕಗಳಿಂದ ಉತ್ಪಾದಿಸಲಾದ ರಾಜಸ್ವ ಕಂದಾಯ | 712873064.00 |
| 3. | ಒಟ್ಟು | 27238577820.00 |

**ಇಲಾಖೆಗೆ ಮಂಜೂರಾಗಿರುವ ಹುದ್ದೆಗಳು, ಭರ್ತಿ ಮಾಡಲಾದ ಹುದ್ದೆಗಳು ಮತ್ತು ಖಾಲಿ ಹುದ್ದೆಗಳ ವೃಂದವಾರು ವಿವರ.**

| ಕ್ರಮ ಸಂಖ್ಯೆ | ಹುದ್ದೆಗಳು | ಮಂಜೂರಾಗಿರುವ ಹುದ್ದೆಗಳು, | ಭರ್ತಿ ಮಾಡಲಾದ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|---|
| 1 | ಮುಖ್ಯ ವಿದ್ಯುತ್ ಪರಿವೀಕ್ಷಕರು | 1 | 0 | 1 |
| 2 | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು | 7 | 7 | 0 |
| 3 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 15 | 14 | 1 |
| 4 | ವಿದ್ಯುತ್ ಪರಿವೀಕ್ಷಕರು | 25 | 22 | 3 |
| 5 | ಉಪ ವಿದ್ಯುತ್ ಪರಿವೀಕ್ಷಕರು | 41 | 37 | 4 |
| 6 | ಸಹಾಯಕ ವಿದ್ಯುತ್ ಪರಿವೀಕ್ಷಕರು | 106 | 49 | 57 |
| 7 | ಹಿರಿಯ ಲೆಕ್ಕಾಧಿಕಾರಿ | 1 | 0 | 1 |
| 8 | ಲೆಕ್ಕಾಧಿಕಾರಿ | 7 | 0 | 7 |
| 9 | ಲೀಗಲ್ ಆಫೀಸರ್ | 1 | 0 | 1 |
| 10 | ವ್ಯವಸ್ಥಾಪಕರು | 8 | 7 | 1 |
| 11 | ಅಧೀಕ್ಷಕರು | 21 | 19 | 2 |
| 12 | ಪ್ರಥಮ ದರ್ಜೆ ಸಹಾಯಕರು | 51 | 26 | 25 |
| 13 | ಶೀಘ್ರಲಿಪಿಗಾರರು | 8 | 1 | 7 |
| 14 | ದ್ವಿತೀಯ ದರ್ಜೆ ಸಹಾಯಕರು | 61 | 17 | 44 |
| 15 | ಬೆರಳಚ್ಚುಗಾರರು | 3 | 1 | 2 |
| 16 | ದಫೇದಾರರು | 2 | 1 | 1 |
| 17 | ಹಿರಿಯ ವಾಹನ ಚಾಲಕರು | 2 | 0 | 2 |
| 18 | ವಾಹನ ಚಾಲಕರು | 9 | 1 | 8 |
| 19 | ಗ್ರೂಪ್ 'ಡಿ' | 46 | 7 | 39 |
| | **ಒಟ್ಟು** | **415** | **209** | **206** |

** ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ವಾಹನಚಾಲಕರು, ಗ್ರೂಪ್ 'ಡಿ' ನೌಕರರನ್ನು ಸರ್ಕಾರದ ನಿರ್ದೇಶನದಂತೆ ಹೊರಗುತ್ತಿಗೆ ಆಧಾರದ ಮೇಲೆ ಭರಿಸಲಾಗಿದೆ.

ವೆಚ್ಚದ ವಿವರಣಾ ಪಟ್ಟಿ:

2045-00-103-0-01 ಲೆಕ್ಕ ಶೀರ್ಷಿಕೆಯಡಿಯಲ್ಲಿ 2021-22 (ಏಪ್ರಿಲ್-2021 ರಿಂದ ಮಾರ್ಚ್-2022 ರ ಅಂತ್ಯಕ್ಕೆ) ಸಾಲಿಗೆ ಆಯವ್ಯಯ ಅನುದಾನದಲ್ಲಿ ಖರ್ಚಾದ ಮೊತ್ತದ ವಿವರ (ರೂ. ಗಳಲ್ಲಿ)

| ಕ್ರಮ ಸಂಖ್ಯೆ: | ಉಪ ಶೀರ್ಷಿಕೆ | ಏಪ್ರಿಲ್-202 ರಿಂದ ಮಾರ್ಚ್-2022 ರ ಅಂತ್ಯಕ್ಕೆ ಆದ ಖರ್ಚು |
|---|---|---|
| 1 | 002-ವೇತನ ಅಧಿಕಾರಿಗಳು | 98850461.00 |
| 2 | 003-ವೇತನ ಸಿಬ್ಬಂದಿ | 29570848.00 |
| 3 | 011-ತುಟ್ಟಿಭತ್ಯೆ | 25180423.00 |
| 4 | 014-ಇತರ ಭತ್ಯೆ | 24005735.00 |
| 5 | 015-ಪೂರಕ ವೆಚ್ಚ | 0.00 |
| 6 | 020-ವೈದ್ಯಕೀಯ ಭತ್ಯೆ | 183192.00 |
| 7 | 021-ವೈದ್ಯಕೀಯ ವೆಚ್ಚ ಮರುಪಾವತಿ | 251761.00 |
| 8 | 041-ಪ್ರಯಾಣ ವೆಚ್ಚ | 800242.00 |
| 9 | 051-ಸಾಮಾನ್ಯ ವೆಚ್ಚ | 12564730.00 |
| 10 | 052-ದೂರವಾಣಿ ವೆಚ್ಚ | 567137.00 |
| 11 | 034-ಹೊರಗುತ್ತಿಗೆ | 12142918.00 |
| 12 | 071-ಕಟ್ಟಡ ವೆಚ್ಚ | 18831807.00 |
| 13 | 195-ಸಾರಿಗೆ ವೆಚ್ಚ | 24738758.00 |
| | ಒಟ್ಟು | **247688012.00** |

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ಒಂದು ಯೋಜನೇತರ ಇಲಾಖೆಯಾಗಿದ್ದು ಯೋಜನೆಗೆ ಸಂಬಂಧಿಸಿದಂತೆ ಯಾವುದೇ ವೆಚ್ಚ ಅಥವಾ ಅನುದಾನ ಬಿಡುಗಡೆಯಾಗಿರುವುದಿಲ್ಲ. ಇಲಾಖೆಗೆ ನೀಡಲಾಗುವ ಆಯವ್ಯಯ ಅನುದಾನವನ್ನು ಸಿಬ್ಬಂಧಿಗಳ ಸಂಬಳ ಸಾರಿಗೆ ಮತ್ತು ಇತರ ಸಾದಿಲ್ವಾರು ವೆಚ್ಚಗಳಿಗಾಗಿ ಮಾತ್ರ ವ್ಯಯಿಸಲಾಗುತ್ತದೆ.

## ಇಲಾಖೆಯ ಕಛೇರಿ ಕಟ್ಟಡಗಳ ವಿವರಗಳು

2021-22 ನೇ ಸಾಲಿನಲ್ಲಿ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ 38 ಕಚೇರಿಗಳು ಕಾರ್ಯನಿರ್ವಹಿಸುತ್ತಿರುತ್ತದೆ. ಗದಗ ಮತ್ತು ಭಾಗಲಕೋಟೆ ಕಚೇರಿಗಳು ಮಿನಿ ವಿಧಾನಸೌಧ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಿರ್ವಹಣೆ ಮತ್ತು ದುರಸ್ಥಿ ವೆಚ್ಚವನ್ನು ನಿರ್ವಹಿಸಲಾಗುತ್ತಿರುತ್ತದೆ. ಉಳಿದ 34 ಕಚೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಅದರ ವಿವರ ಕೆಳಕಂಡಂತಿರುತ್ತದೆ. (ವಿದ್ಯುಚ್ಛಕ್ತಿ ಬಿಲ್ಲಿನ ಮೊತ್ತವೂ ಸೇರಿದಂತೆ)

| ಕ್ರಮ ಸಂಖ್ಯೆ | ಕಛೇರಿ | ಮಾಸಿಕ ಬಾಡಿಗೆ (ರೂ) | ವಾರ್ಷಿಕ (ರೂ) |
|---|---|---|---|
| 1 | ಕೇಂದ್ರ ಕಛೇರಿ | 680000 | 8160000 |
| 2 | ಅಮುವಿಪ ಬೆಂ.ದ | 120000 | 1440000 |
| 3 | ಉಮುವಿಪ, ಬೆಂ.ಹೆ.ದ | 50000 | 600000 |
| 4 | ಉಮುವಿಪ, ಬೆಂ.ಪ. | 55000 | 660000 |
| 5 | ಉಮುವಿಪ, ಬೆಂ. ಹೆ.ಪ. | 53000 | 636000 |
| 6 | ವಿಪ, ಬೆಂ. ದ | 82000 | 984000 |
| 7 | ರಾಮನಗರ | 12000 | 144000 |
| 8 | ತುಮಕೂರು | 17000 | 204000 |
| 9 | ಅಮುವಿಪ, ಬೆಂ.ಉ ಹಾಗೂ ಉಮುವಿಪ ಬೆಂ.ಪೂ | 140000 | 1680000 |
| 10 | ಚಿತ್ರದುರ್ಗ | 35000 | 420000 |
| 11 | ದಾವಣಗೆರೆ | 18500 | 222000 |
| 12 | ಉಮುವಿಪ ಬೆಂ.ಹೆ.ಉ | 63410 | 760920 |
| 13 | ಉಮುವಿಪ ಬೆಂ.ಹೆ.ಪೂ | 72000 | 864000 |
| 14 | ಕೋಲಾರ್ | 11000 | 132000 |
| 15 | ಚಿಕ್ಕಬಳ್ಳಾಪುರ | 12400 | 148800 |
| 16 | ಉಮುವಿಪ, ಮೈಸೂರು | 67000 | 804000 |
| 17 | ಮಂಡ್ಯ | 11000 | 132000 |
| 18 | ಚಾಮರಾಜ ನಗರ | 9200 | 110000 |
| 19 | ಹಾಸನ್ | 31800 | 381600 |
| 20 | ಮಡಿಕೇರಿ | 9200 | 110000 |
| 21 | ಉಮುವಿಪ, ಧಾರವಾಡ | 16000 | 192000 |
| 22 | ಶಿರಸಿ | 7200 | 86400 |
| 23 | ಹಾವೇರಿ | 10800 | 192000 |
| 24 | ಬೆಳಗಾಂ | 0 | 0 |
| 25 | ಬಿಜಾಪುರ | 10800 | 129600 |
| 26 | ಗದಗ | 2756 | 33072 |
| 27 | ಬಾಗಲಕೋಟೆ | 2673 | 32076 |
| 28 | ಉಮುವಿಪ, ಮಂಗಳೂರು | 28500 | 342000 |
| 29 | ಉಡುಪಿ | 23500 | 282000 |
| 30 | ಶಿವಮೊಗ್ಗ | 28000 | 336000 |
| 31 | ಚಿಕ್ಕಮಗಳೂರು | 8500 | 102000 |
| 32 | ಉಮುವಿಪ, ಬಳ್ಳಾರಿ | 18500 | 222000 |
| 33 | ರಾಯಚೂರು | 43000 | 516000 |
| 34 | ಕೊಪ್ಪಳ | 43000 | 516000 |
| 35 | ಕಲಬುರಗಿ | 10800 | 129600 |
| 36 | ಬೀದರ್ | 11500 | 138000 |
| 37 | ಯಾದಗಿರಿ | 12000 | 144000 |
| | ಒಟ್ಟು ಮೊತ್ತ ರೂಗಳಲ್ಲಿ | | 21986068 |

## ವಿದ್ಯುತ್ ಪರಿವೀಕ್ಷಣಾಲಯ – ವಾಹನಗಳ ಮಾಹಿತಿ

2021-22

| | |
|---|---|
| ಇಲಾಖೆಯಲ್ಲಿ ಒಟ್ಟು 5 ಸಂಖ್ಯೆಯ ಸರ್ಕಾರಿ ವಾಹನಗಳು ಇರುತ್ತದೆ.. ಅವುಗಳಿಗೆ ಇಂಧನ ನಿರ್ವಹಣೆ, ದುರಸ್ಥಿಗೆ ವಾರ್ಷಿಕ ತಗಲುವ ವೆಚ್ಚ | **45,60,000/-** |
| 39 ವಾಹನಗಳಿಗೆ ತಿಂಗಳಿಗೆ ರೂ. 30,000/- ರಂತೆ | **1,40,40,000/-** |
| 34 ವಾಹನಗಳಿಗೆ ತಿಂಗಳಿಗೆ ರೂ. 25,000/- ರಂತೆ | **1,02,00,000/-** |
| ಒಟ್ಟು ಮೊತ್ತ ರೂ ಗಳಲ್ಲಿ | **2,88,00,000/-** |

ಸದರಿ ಮಾಹಿತಿಗಳನ್ನು ತಮ್ಮ ಅವಗಾಹನೆಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸಲಾಗಿದೆ.

15/7/2022

ಮುಖ್ಯ ವಿದ್ಯುತ್ ಪರಿವೀಕ್ಷಕರು (ಪ್ರಭಾರ)

ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು.
ವಿದ್ಯುತ್ ಪರಿವೀಕ್ಷಣಾಲಯ.
ಬೆಂಗಳೂರು.